# Vijaya Karnataka

**Date:** 28-06-2017

Edition: Karnataka

**Language: Kannada**

# ಎಸ್‌ಡಿಎಂಗೆ ಅಂತಾರಾಷ್ಟ್ರೀಯ ಮಾನ್ಯತೆ: ಅಮೆರಿಕದಲ್ಲಿ ಪತ್ರ ಸ್ವೀಕರಿಸಿದ ಡಾ. ಹೆಗ್ಗಡೆ

■ **ವಿಕ ಸುದ್ದಿಲೋಕ** ಬೆಳ್ತಂಗಡಿ

ಮೈಸೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಸಂಸ್ಥೆಯ ಪೋಸ್ಟ್ ಗ್ರಾಜು ಯೇಟ್ ಡಿಪ್ಲೋಮಾ ಇನ್ ಮ್ಯಾನೇಜ್‌ಮೆಂಟ್ ಕೋರ್ಸ್‌ಗೆ ಅಮೆರಿಕಾದ ಅಕ್ರೆಡಿಟೇಷನ್ ಕೌನ್ಸಿಲ್ ಫಾರ್ ಬಿಸಿನೆಸ್ ಸ್ಕೂಲ್ಸ್ ಅಂಡ್ ಪ್ರೋಗ್ರಾಮ್ಸ್‌ನಿಂದ ಮಾನ್ಯತೆ ದೊರಕಿದೆ.

ಅಮೆರಿಕದ ಲಾಸ್ ಏಂಜಲೀಸ್‌ನ ಅನಹೆಮ್ ನಗರದಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ಎಸ್‌ಡಿಎಂ ಸಂಸ್ಥೆಯ ಅಧ್ಯಕ್ಷ ಡಾ. ವೀರೇಂದ್ರ ಹೆಗ್ಗಡೆಯವರು ಸಂಸ್ಥೆಯ ನಿರ್ದೇಶಕರಾದ ಡಾ. ಎನ್.ಆರ್. ಪರಶುರಾಮನ್‌ರೊಂದಿಗೆ ಚೀಫ್ ಅಕ್ರೆಡಿ ಟೇಷನ್ ಆಫೀಸರ್ ಡಾ. ಸ್ಟೀವ್ ಪಾರ್ಸ್ಕೆಲ್ ಹಾಗೂ ಬೋರ್ಡ್ ಆಫ್ ಕಮಿಷನರ್ಸ್‌ನ ಅಧ್ಯಕ್ಷ ಡಾ. ರೇ ಎಲ್ಡ್ರಿಡ್ಜ್ ಅವರಿಂದ ಮಾನ್ಯತಾಪತ್ರ ಸ್ವೀಕರಿಸಿದರು.

ಈ ಸಂಸ್ಥೆಯು ಜಾಗತಿಕ ಮನ್ನಣೆಗೆ ಪಾತ್ರವಾದ 'ಬಿ' ಸ್ಕೂಲ್ ಆಗಿದ್ದು ಈ ಮಾನ್ಯತಾ ಪತ್ರ ದೊರೆಯುವುದರಿಂದ ವಿಶ್ವದ 'ಬಿ' ಸ್ಕೂಲ್‌ಗಳು ಮತ್ತು ವಿಶ್ವವಿದ್ಯಾಲಯಗಳೊಂದಿಗೆ ವಿನಿಮಯ ಕಾರ್ಯಕ್ರಮಗಳು, ಸಂಶೋಧನಾ ಕಾರ್ಯಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಸಹಭಾಗಿತ್ವ ಹೊಂದಲು ಎಸ್‌ಡಿಎಂ ಸಂಸ್ಥೆಗೆ ಅವಕಾಶ ದೊರಕಲಿದೆ. ವಿದ್ಯಾರ್ಥಿಗಳು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗಲಿದೆ. ಸಂಸ್ಥೆಯ ಪ್ರಾಧ್ಯಾಪ ಕರು ಕೂಡ ಜಾಗತಿಕ ಮಟ್ಟದಲ್ಲಿ ಮಾನ್ಯತೆ ಹೊಂದಿದ ಇತರ ಸಂಸ್ಥೆಗಳ ಅಧ್ಯಾಪಕರೊಂದಿಗೆ ವಿಚಾರ ವಿನಿಮಯಕ್ಕೆ ಅವಕಾಶವಾಗುತ್ತದೆ.




ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಸಂಸ್ಥೆಯ ಅಧ್ಯಕ್ಷ ಡಾ.ಡಿ. ವೀರೇಂದ್ರ ಹೆಗ್ಗಡೆ ಚೀಫ್ ಅಕ್ರೆಡಿಟೇಷನ್ ಆಫೀಸರ್ ಡಾ. ಸ್ಟೀವ್ ಪಾರ್ಸ್ಕೆಲ್ ಹಾಗೂ ಬೋರ್ಡ್ ಆಫ್ ಕಮಿಷನರ್ಸ್‌ನ ಅಧ್ಯಕ್ಷ ಡಾ. ರೇ ಎಲ್ಡ್ರಿಡ್ಜ್ ಅವರಿಂದ ಮಾನ್ಯತೆಯ ಪತ್ರ ಸ್ವೀಕರಿಸಿದರು.

ಸಂಸ್ಥೆಯಲ್ಲಿ ನಾಯಕತ್ವ ಗುಣ, ಯೋಜನಾಬದ್ಧ ಬೋಧನಾ ವಿಧಾನ, ಪ್ರಾಧ್ಯಾಪಕರ ಶೈಕ್ಷಣಿಕ ಸಾಧನೆ, ವಿದ್ಯಾರ್ಥಿಗಳೊಂದಿಗೆ ಸೌಹಾರ್ದಯುತ ಸಂಬಂಧ, ಮಾನವೀಯ ಮೌಲ್ಯಗಳು -ಇತ್ಯಾದಿಗಳ ಪರಿಶೀಲನೆ ನಡೆಸಿ ಸಂಸ್ಥೆಯನ್ನು ಆಯ್ಕೆ ಮಾಡಲಾಗಿದೆ. ಸಂಸ್ಥೆಯು ವಿದ್ಯಾರ್ಥಿಗಳಿಗೆ ನೀಡುತ್ತಿ ರುವ ಉತ್ಕೃಷ್ಟ ಗುಣಮಟ್ಟದ ಉದ್ಯಮಾಡಳಿತ ಶಿಕ್ಷಣದ ಗುಣಮಟ್ಟವನ್ನು ಪರಿಶೀಲಿಸಿ ಈ ಮಾನ್ಯತೆಯನ್ನು ನೀಡಲಾಗಿದೆ. ಭಾರತದಲ್ಲಿ ಇರುವ 'ಬಿ' ಶಾಲೆಗಳ ಪೈಕಿ ಇಎಫ್‌ಎಂಡಿ ಮತ್ತು ಎಸಿಬಿ ಎಸ್‌ಪಿ ಈ ಎರಡೂ ಮಾನ್ಯತೆಗಳನ್ನು ಪಡೆದ ಏಕೈಕ ಸಂಸ್ಥೆ ಎಂಬ ಹೆಗ್ಗಳಿಕೆಗೆ ಎಸ್‌ಡಿಎಂ ಪಾತ್ರವಾಗಿದೆ.

**ACBSP Awards Accreditation to SDMIMD's PGDM**